KAUK620028022023

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ**

**-: ಉಪಸ್ಥಿತರು :-**

**ಶ್ರೀ ಈರಣ್ಣ ಹುಣಶಿಕಟ್ಟಿ.,**

**ಬಿ.ಕಾಂ.,ಎಲ್.ಎಲ್.ಬಿ.,**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**

**ಜೆ.ಎಮ್.ಎಫ್.ಸಿ., ಹೊನ್ನಾವರ.**

**ದಿನಾಂಕ 16 ನೇ ಡಿಸೆಂಬರ್ ಮಾಹೆಯ 2023 ನೇ ಇಸವಿ.**

**ಮೂಲ ದಾವಾ ಸಂಖ್ಯೆ:- 146/2023.**

**ವಾದಿಯರು:-** ಶ್ರೀ. ಶ್ರೀರಂಗ ನಾರಾಯಣ ಪ್ರಭು,
ವಯಸ್ಸು ಸುಮಾರುಃ- 72 ವರ್ಷ,
ಉದ್ಯೋಗಃ- ವ್ಯಾಪಾರ,
ಸಾಕೀನಃ- ಕರ್ಕಿ, ಹೊನ್ನಾವರ,
ತಾಲೂಕುಃ- ಹೊನ್ನಾವರ (ಉ.ಕ).

(ವಾದಿಯರ ಪರವಾಗಿ ಶ್ರೀ ಎಮ್.ಎಲ್.ಎನ್., ವಕೀಲರು)

**-ವಿರುದ್ಧ-**

**ಪ್ರತಿವಾದಿಯರು:-** ಶ್ರೀ. ಶ್ರೀರಾಮ @ ದೀಪಕ ನಾರಾಯಣ ಪ್ರಭು,
ವಯಸ್ಸು ಸುಮಾರುಃ- 62 ವರ್ಷ,
ಉದ್ಯೋಗಃ- ವ್ಯಾಪಾರ,
ಸಾಕೀನಃ- ಬಂದರ್ ರಸ್ತೆ, ಹೊನ್ನಾವರ,
ತಾಲೂಕುಃ- ಹೊನ್ನಾವರ (ಉ.ಕ).

(ಪ್ರತಿವಾದಿಯರ ಪರವಾಗಿ ಶ್ರೀ ಎಮ್.ಎಸ್.ಬಿ., ವಕೀಲರು)

**ಮಧ್ಯಂತರ ಅರ್ಜಿ ಸಂಖ್ಯೆ 3 ರ ಪಕ್ಷಗಾರರು**

**ಅರ್ಜಿದಾರರು**:- ಶ್ರೀ. ಶ್ರೀರಂಗ ನಾರಾಯಣ ಪ್ರಭು,

(ಅರ್ಜಿದಾರರ ಪರವಾಗಿ ಶ್ರೀ ವಿ.ಆರ್.ಎನ್., ವಕೀಲರು)

**-ವಿರುದ್ಧ-**

**ಎದುರುದಾರರು**:- ಶ್ರೀ. ಶ್ರೀರಾಮ @ ದೀಪಕ ನಾರಾಯಣ ಪ್ರಭು,

(ಎದುರುದಾರರ ಪರವಾಗಿ ಶ್ರೀ ಎಮ್.ಎಸ್.ಬಿ., ವಕೀಲರು)

*******

**-: ಮಧ್ಯಂತರ ಅರ್ಜಿ ಸಂಖ್ಯೆ 3 ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ರ ಮೇಲಿನ ಆದೇಶ :-**

**-:ದಾವಾ ಅನುಸೂಚಿ ಸ್ವತ್ತುಗಳ ವಿವರ:-**

ಹೊನ್ನಾವರ ತಾಲೂಕು ಹೊನ್ನಾವರ ಗ್ರಾಮದಲ್ಲಿರುವ ಸರ್ವೇ ನಂ. 2 ಕ್ಯೂ ಹಿಸ್ಸಾ 2 ಒಟ್ಟು ಕ್ಷೇತ್ರ 00-04-12.50 ಸ್ಥಳವು ದಾವಾ ಸ್ಥಳವಾಗಿರುತ್ತವೆ.

ಪ್ರಸ್ತುತ ದಾವೆಯನ್ನು ವಾದಿಯು, ಪ್ರತಿವಾದಿಯ ವಿರುದ್ದ ಶಾಶ್ವತ ಪ್ರತಿಬಂಧಕಾಜ್ಞೆಯನ್ನು ಕೋರಿ ಸಲ್ಲಿಸಿರುತ್ತಾರೆ. ಜೊತೆಯಲ್ಲಿ ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿ, ಈ ದಾವೆಯು ನಿಖಾಲೆ ಆಗುವವರೆಗೆ ಪ್ರತಿವಾದಿ ಯಾ ಅವರ ಕಡೆಯವರು ವಾದಿಯು ದಾವಾ ಸ್ಥಳದಲ್ಲಿರುವ ದಾರಿಯ ಮೂಲಕ ತಿರುಗಾಟ ಮಾಡಲು ಆತಂಕಪಡಿಸದಂತೆ ತಮ್ಮ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

## 2. <u>ಅರ್ಜಿದಾರರ ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ</u> :–

ವಾದಿಯು ಅರ್ಜಿಗೆ ಪೂರಕವಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಹೇಳುವುದೇನೆಂದರೆ, ದಾವಾ ಸ್ಥಳಗಳು ವಾದಿ ಮತ್ತು ಪ್ರತಿವಾದಿಯ ಸಾಮಾಯಿಕ ಹಕ್ಕಿನ ಸ್ಥಳವಾಗಿರುತ್ತವೆ. ಸದ್ರಿ ದಾವಾ ಸ್ಥಳಗಳಿಗೆ ಸಂಬಂಧಪಟ್ಟಂತೆ ವಾದಿ ಮತ್ತು ಪ್ರತಿವಾದಿಯ ಹೆಸರಲ್ಲದೆ ಉಳಿದ 3 ಜನರ ಹೆಸರು ಕೂಡಾ ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುತ್ತದೆ. ಸದ್ರಿ ಸ್ಥಳಗಳು ವಾಣಿಜ್ಯ ಉದ್ದೇಶಕ್ಕಾಗಿ ಭೂ–ಪರಿವರ್ತನೆಯಾಗಿರುತ್ತದೆ. ದಾವಾ ಸ್ಥಳಗಳು ವಾದಿ ಮತ್ತು ಪ್ರತಿವಾದಿಯ ಮೃತ ತಾಯಿಯಾದ ಶಾಂತಾಬಾಯಿ ನಾರಾಯಣ ಪ್ರಭುರವರು ಬರೆದಿಟ್ಟಂತಹ ವಿಲ್–ನಾಮೆ ಪ್ರಕಾರ ಪ್ರಾಪ್ತವಾಗಿರುತ್ತವೆ. ಮುಂದುವರೆದು, ದಾವಾ ಸ್ಥಳದ ದಕ್ಷಿಣ ದಿಕ್ಕಿನಂಚಿನಿಂದ ಪೂರ್ವ–ಪಶ್ಚಿಮವಾಗಿ ವಾದಿ ಮತ್ತು ಪ್ರತಿವಾದಿಯ ಕುಟುಂಬದ ಇನ್ನುಳಿದ ಆಸ್ತಿಗಳಿಗೆ ಹೋಗಿ ಬರಲು ಸಂಪರ್ಕ ಕಲ್ಪಿಸುವ ರಸ್ತೆ ಇರುತ್ತದೆ. ಸದ್ರಿ ರಸ್ತೆಯು 25 ಪೂಟ್ ಉದ್ದ, 15 ಪೂಟ್ ಅಗಲವಿದ್ದು ಪೂರ್ವ ಪಶ್ಚಿಮಾಭಿಮುಖವಾಗಿ ಹಾದು–ಹೋಗಿರುತ್ತದೆ. ದಿನಾಂಕ 05/07/2023 ರಂದು ವಾದಿಯು ತನ್ನ ಹಕ್ಕಿನ ಸ್ಥಳಗಳಿಗೆ ಸಂಬಂಧಿಸಿ ಮಳೆಗಾಲಕ್ಕೆ ಸರಾಗವಾಗಿ ನೀರು ಹಾದು–ಹೋಗಲು ಮತ್ತು ಅವಶ್ಯವುಳ್ಳ ಇನ್ನಿತರೆ ಕಾರ್ಯಗಳನ್ನು ಮಾಡಿ ಬರುವ ಬಗ್ಗೆ ಕೆಲಸಗಾರರನ್ನು ಕರೆದುಕೊಂಡು ದಾವಾ ಸ್ಥಳಕ್ಕೆ ಹೋದಾಗ ಪ್ರತಿವಾದಿಯು ಸದ್ರಿ ಸ್ಥಳದ ಮೂಲಕ ಅಂದರೆ ದಾರಿಯನ್ನು ನೀನು ಉಪಯೋಗಿಸುವಂತಿಲ್ಲ ಹಾಗೂ ಇಲ್ಲಿಂದ ತಿರುಗಾಟ ಮಾಡಬೇಕಾಗಿದ್ದರೆ ಬೇರೆ ಕಡೆಯಿಂದ ನಿನ್ನ ಹಕ್ಕಿನ ಸ್ಥಳಗಳಿಗೆ ಹೋಗಲು ರಸ್ತೆ ನಿರ್ಮಾಣ ಮಾಡಿಕೋ ಎಂದು ಆತಂಕಿಸಿದ್ದು ಇರುತ್ತದೆ. ಆದ್ದರಿಂದ ವಾದಿಯು ದಾವಾ ಸ್ಥಳದಲ್ಲಿನ ದಾರಿಯನ್ನು ಉಪಯೋಗಿ ಬರಲು

ಪ್ರತಿವಾದಿಯು ಕಾನೂನು ಬಾಹಿರವಾಗಿ ಹಸ್ತಕ್ಷೇಪ ಮಾಡದಂತೆ ತನ್ನ ಪರವಾಗಿ ಪ್ರಸ್ತುತ ಮಧ್ಯಂತರ ಅರ್ಜಿ ಸಂಖ್ಯೆ3 ನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

**3.** ಸದರಿ ಅರ್ಜಿಗೆ ಪ್ರತಿವಾದಿ-ಪರ ವಕೀಲರು ತಮ್ಮ ತಕರಾರನ್ನು ಸಲ್ಲಿಸಿ, ಪ್ಯಾರಾ ನಂ.1 ರಿಂದ 3 ರ ಭಾಗದ ಸಂಗತಿಗಳನ್ನು ನಿರ್ದಿಷ್ಟವಾಗಿ ಅಲ್ಲಗಳೆಯುತ್ತಾರೆ. ಮುಂದುವರೆದು ದಾವಾ ಸ್ಥಳಗಳು ವಾದಿ ಮತ್ತು ಪ್ರತಿವಾದಿಯರ ಮೈತ ತಂದೆಯ ಸ್ವಯಾರ್ಜಿತ ಮಾಲ್ಕಿ ಹಕ್ಕಿನ ಆಸ್ತಿಗಳಾಗಿರುತ್ತವೆ. ಈ ಪ್ರತಿವಾದಿಯ ಮೈತ ತಂದೆಯು ತಮ್ಮ ಜೀವಿತ ಕಾಲದಲ್ಲಿ ತಮ್ಮ ಹಿತ ಅಹಿತಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯ ಇರುವಾಗಲೇ ದಿನಾಂಕ 02-04-2013 ರಂದು ಈ ಪ್ರತಿವಾದಿಯ ಹೆಸರಿಗೆ ನೋಂದನಿಶಿ ವಿಲ್ ನಾಮೆ ಯಾನೆ ಮರಣೋತ್ತರ ವ್ಯವಸ್ಥಾ ಪತ್ರ ಮಾಡಿದ್ದಿರುತ್ತದೆ. ನಂತರ ಈ ಪ್ರತಿವಾದಿಯ ತಂದೆಯು ದಿನಾಂಕ 03-09-2014 ರಂದು ಮೈತಾದ ನಂತರ ಮೈತರು ಮಾಡಿಟ್ಟ ನೋಂದನಿಶಿ ವೀಲ್ ನಾಮೆಯಂತೆ ಹೊನ್ನಾವರ ಗ್ರಾಮದ ಎಂ.ಆರ್.ನಂ ಹೆಚ್ 93/2014-15 ನೇದರ ಪ್ರಕಾರ ಗ್ರಾಮ ಪಹಣಿಯಲ್ಲಿ ಈ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆ ಮತ್ತು ಸದ್ರಿ ಸ್ಥಳದಲ್ಲಿರುವ 2 ಇಮಾರತ್ತುಗಳಿಗೂ ಸಹ ಹೊನ್ನಾವರ ಪಟ್ಟಣ ಪಂಚಾಯತ ದಾಖಲೆಗಳಲ್ಲಿಯೂ ಸಹ ಈ ಪ್ರತಿವಾದಿಯ ಹೆಸರು ನಮೂದಾಗಿದ್ದಿರುತ್ತದೆ. ಮುಂದುವರೆದು, ಈ ಪ್ರತಿವಾದಿಯ ತಂದೆಯು ಈ ಮೇಲಿನ ಆಸ್ತಿಗಳ ಸಂಬಂಧ ವೀಲ್ ನಾಮೆ ಪ್ರಕಾರ ಪ್ರತಿವಾದಿಯ ಹೆಸರು ದಾಖಲಾದ ಸತ್ಯ ಸಂಗತಿಯನ್ನು ತಿಳಿದೂ ತಿಳಿದು ಈ ಪ್ರತಿವಾದಿಯನ್ನು ಹೇಗಾದರೂ ಮಣಿಸಬೇಕೆಂಬ ದುರುದ್ದೇಶ ಮತ್ತು ದ್ವೇಷದಿಂದ ಇದ್ದು, ಈ ಹಿಂದೆಯೂ ಹಲವಾರು ಬಾರಿ ಈ ಪ್ರತಿವಾದಿಯ ಸ್ವಂತ ಹಕ್ಕಿನ ಸ್ಥಳಕ್ಕೆ ಅಕ್ರಮ ಪ್ರವೇಶ ಮಾಡಿ, ಈ ಪ್ರತಿವಾದಿಯ ಸಾಮಾನು ಸರಂಜಾಮುಗಳನ್ನೂ ಸಹ ಹಾಳು ಮಾಡಿದ್ದರಿಂದ ಈ

ಪ್ರತಿವಾದಿಯು ವಾದಿ ಹಾಗೂ ಆತನ ಮಗನ ಮೇಲೆ ಹೊನ್ನಾವರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದಂತೆ, ಪೋಲೀಸರು ಮಾನ್ಯ ಕೋರ್ಟಿಗೆ ಪ್ರಥಮ ವರ್ತಮಾನ ವರದಿಯನ್ನೂ ಸಹ ಸಲ್ಲಿಸಿದ್ದಿರುತ್ತದೆ. ಆದಾಗ್ಯೂ ವಾದಿಯು ಈ ಪ್ರತಿವಾದಿಗೆ ಯಾವುದಾದರೂ ರೂಪದಲ್ಲಿ ತೊಂದರೆ ಕೊಡಬೇಕೆನ್ನುವ ದುರುದ್ದೇಶದಿಂದ ಈ ದಾವೆಯನ್ನು ಸಲ್ಲಿಸಿ ಕೋರ್ಟಿಗೆ ತಪ್ಪು ಸಮಜೂತ ನೀಡಿ, ಪ್ರತಿವಾದಿಯ ವಿರುದ್ಧ ಹಂಗಾಮಿ ಪ್ರತಿಬಂಧಕಾಜ್ಞೆ ಆದೇಶ ಪಡೆದುಕೊಳ್ಳುವ ಕುರಿತು ಸುಳ್ಳು ಮಜೂರಿನ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಆದ್ದರಿಂದ, ಸದರಿ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

4. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಮತ್ತು ದಾವೆಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಸದರಿ ದಾಖಲೆಗಳನ್ನು ಪರಿಶೀಲಿಸಿದ ನಂತರ ನ್ಯಾಯಾಲಯಕ್ಕೆ ಈ ಅರ್ಜಿಯ ನಿರ್ಧಾರಣೆಗಾಗಿ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

**-:ಅಂಶಗಳು:-**

1. ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ವಾದಿಯು ತಂದಿರುತ್ತಾರೆಯೇ?

2. ದಾವೆಯಲ್ಲಿ ಅನುಕೂಲತೆಯ ಒಲವು ತಮ್ಮ ಪರ ಇದೆ ಎಂದು ವಾದಿಯು ರುಜುವಾತುಪಡಿಸುವರೇ?

3. ಅರ್ಜಿಯನ್ನು ಪುರಸ್ಕರಿಸದಿದ್ದರೇ ತಮಗೆ ತುಂಬಲಾರದ ನಷ್ಟ ಉಂಟಾಗುತ್ತದೆಂದು ವಾದಿಯು ರುಜುವಾತುಪಡಿಸುವರೇ?

4. ಯಾವ ಆದೇಶ?

5. ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

**ಅಂಶ ಸಂಖ್ಯೆ**–1. **ನಕಾರಾತ್ಮಕವಾಗಿ**
**ಅಂಶ ಸಂಖ್ಯೆ**–2. **ನಕಾರಾತ್ಮಕವಾಗಿ**
**ಅಂಶ ಸಂಖ್ಯೆ**–3. **ನಕಾರಾತ್ಮಕವಾಗಿ**
**ಅಂಶ ಸಂಖ್ಯೆ**–4. **ಅಂತಿಮ ಆದೇಶದಂತೆ**

**ಈ ಕೆಳಕಂಡ ಕಾರಣಗಳಿಗಾಗಿ,**

******

**–:ಕಾರಣಗಳು:–**

6. **ಅಂಶ ಸಂಖ್ಯೆ** 1:– **ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆ.**

ವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ಪ್ರತಿವಾದಿಯು ದಾವಾ ಅನುಸೂಚಿತ ಸ್ವತ್ತಿನ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಹಸ್ತಕ್ಷೇಪವನ್ನುಂಟುಮಾಡಿ ಆತಂಕಪಡಿಸುತ್ತಿದ್ದಾರೆ ಎಂಬುದಾಗಿ ಹೇಳಿರುತ್ತಾರೆ. ಆದ್ದರಿಂದ ಮಧ್ಯಂತರ ಅರ್ಜಿ ಸಂಖ್ಯೆ 3 ರಡಿಯಲ್ಲಿ ಈ ದಾವೆಯು ನಿಖಾಲೆ ಆಗುವವರೆಗೆ ಪ್ರತಿವಾದಿ ಯಾ ಅವರ ಕಡೆಯವರು ವಾದಿಯು ದಾವಾ ಸ್ಥಳದಲ್ಲಿರುವ ದಾರಿಯ ಮೂಲಕ ತಿರುಗಾಟ ಮಾಡಲು ಆತಂಕಪಡಿಸದಂತೆ ಹಾಗೂ ವಾದಿಯ ಹಕ್ಕನ್ನು ಕಾಪಾಡುವ ದೃಷ್ಟಿಯಿಂದ ನ್ಯಾಯಸಮ್ಮತವಾದ ತಾತ್ಕಾಲಿಕ ನಿರ್ಭಂದಕಾಜ್ಞೆ ಪರಿಹಾರವನ್ನು ತಮ್ಮ ಪರವಾಗಿ ಹೊರಡಿಸಬೇಕು ಎಂದು ಕ್ಲೇಮನ್ನು ಮಾಡಿರುತ್ತಾರೆ.

ಆದರೆ ವಾದಿಯ ಅರ್ಜಿಗೆ ತದ್ವಿರುದ್ಧವಾಗಿ ಪ್ರತಿವಾದಿಯು ತನ್ನ ಆಕ್ಷೇಪಣೆಯನ್ನು ಸಲ್ಲಿಸಿ ಹೇಳುವುದೇನೆಂದರೆ, ದಾವಾ ಸ್ಥಳಗಳು ವಾದಿ ಮತ್ತು ಪ್ರತಿವಾದಿಯ ಸಾಮಾಯಿಕ ಹಕ್ಕಿನ ಸ್ಥಳಗಳಾಗಿರುವುದಿಲ್ಲ, ಹಾಗೂ ವಾದಿಯು ಈ ಪ್ರತಿವಾದಿಗೆ ಯಾವುದಾದರೂ ರೂಪದಲ್ಲಿ

ತೊಂದರೆ ಕೊಡಬೇಕೆನ್ನುವ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನುಡಿದಿದ್ದಾರೆ.

7. ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡುವ ಪ್ರಮುಖ ಉದ್ದೇಶವು ಪಕ್ಷಗಾರರಿಗೆ ನೀಡುವಂತ ಕಾನೂನು ಬದ್ಧ ಹಕ್ಕುಗಳು ಮತ್ತು ಸದರಿ ಹಕ್ಕುಗಳನ್ನು ಸಂಬಂಧಿಸುವ ವ್ಯಾಜ್ಯಗಳು ಸಂಪೂರ್ಣವಾಗಿ ತೀರ್ಮಾನವಾಗುವವರೆಗೆ ಸ್ವತ್ತನ್ನು ಯಾಥಾಸ್ಥಿತಿಯಲ್ಲಿ ಕಾಪಾಡುವುದು. ತಾತ್ಕಾಲಿಕ ನಿರ್ಭಂಧಕಾಜ್ಞೆ ಅರ್ಜಿಯನ್ನು ತೀರ್ಮಾನಿಸುವಾಗ, ನ್ಯಾಯಾಲಯವು ಸದರಿ ನಿರ್ಭಂಧಕಾಜ್ಞೆ ಆದೇಶವನ್ನು ನೀಡಿರುವುದರಿಂದ ಯಾವ ರೀತಿಯ ಪರಿಣಾಮಗಳು ಪಕ್ಷಗಾರರ ಮೇಲಿನ ಹಿತಾಸಕ್ತಿಯ ಮೇಲೆ ಪರಿಣಾಮವನ್ನು ಉಂಟುಮಾಡುತ್ತವೆ ಎಂಬುದನ್ನು ಪರಿಗಣಿಸುವುದು ಅವಶ್ಯವಾಗಿರುತ್ತದೆ. ತಾತ್ಕಾಲಿಕ ನಿರ್ಭಂಧಕಾಜ್ಞೆ ಆದೇಶವು ನ್ಯಾಯಸಮ್ಮತವಾದ ಪರಿಹಾರವಾಗಿದ್ದು, ಸದರಿ ಪರಿಹಾರವನ್ನು ನೀಡುವುದು ನ್ಯಾಯಾಲಯದ ವಿವೇಚನಾತ್ಮಕವಾದ ಅಧಿಕಾರವಾಗಿರುತ್ತದೆ. ಆದರೆ ಸದರಿ ವಿವೇಚನಾತ್ಮಕ ಅಧಿಕಾರವನ್ನು ನ್ಯಾಯಾಲಯವು ನಿರಂಕುಶ ರೀತಿಯಲ್ಲಿ ಚಲಾಯಿಸುವಂತಹದ್ದಾಗಿರುವುದಿಲ್ಲ. ಅಂದರೆ ನ್ಯಾಯಾಲಯವು ತಾತ್ಕಾಲಿಕ ನಿರ್ಭಂಧಕಾಜ್ಞೆ ನೀಡಬೇಕಾದರೆ ವಾದಿಯು ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸಿರುವರೇ? ಅನುಕೂಲತೆಯ ಒಲವು ತನ್ನ ಪರವಾಗಿ ಇದೆಯೇ? ಮತ್ತು ಅರ್ಜಿಯನ್ನು ವಜಾಗೊಳಿಸುವುದರಿಂದ ತನಗೆ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ? ಎಂಬುದನ್ನು ನಿರೂಪಿಸಬೇಕಾಗಿರುತ್ತದೆ. ಪ್ರಸ್ತುತ ಅಂಶದಲ್ಲಿ ಈ ನ್ಯಾಯಾಲಯವು ವಾದಿಯು ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ನ್ಯಾಯಾಲಯಕ್ಕೆ ತಂದಿರುತ್ತಾರೆಯೇ ಎನ್ನುವ ಅಂಶವನ್ನು ಪರಿಗಣಿಸಲು ಮುಂದಾಗಿರುತ್ತದೆ.

ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆ ಎಂದರೆ ನ್ಯಾಯಾಲಯಕ್ಕೆ ವಾದಿಯು ತಂದಿರುವ ವ್ಯಾಜ್ಯದಲ್ಲಿ ತಿರುಳಿದ್ದು, ಸದರಿ ವ್ಯಾಜ್ಯವನ್ನು ಸದುದ್ದೇಶದಿಂದ ಮಾಡಿದ್ದು, ವಾದಿಯ ವ್ಯಾಜ್ಯವು ವಿಚಾರಣೆಗೆ ಯೋಗ್ಯವಾಗಿದೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾಗಬೇಕಾಗುತ್ತದೆ. ಮುಂದುವರಿದು, ವಾದಿಯು ಈ ನ್ಯಾಯಾಲಯದಿಂದ ಅಂತಿಮ ಪರಿಹಾರವನ್ನು ಪಡೆದುಕೊಳ್ಳುವ ಸಂಭವವಿರುತ್ತದೆ ಎನ್ನುವ ವಿಚಾರವು ಸಹ ಮೊದಲ ನೋಟಕ್ಕೆ ಕಾಣಿಸಬೇಕಾಗಿರುವುದು ಅವಶ್ಯವಿರುತ್ತದೆ. ಅಂದರೆ ವಾದಿಯು ಮೊದಲ ನೋಟಕ್ಕೆ ಹಕ್ಕು ತನ್ನ ಪರವಾಗಿದ್ದು ಸದರಿ ಮೊದಲ ನೋಟದ ಹಕ್ಕನ್ನು ಪ್ರತಿವಾದಿಯು ವ್ಯತಿಕ್ರಮಣ ಮಾಡಿದ್ದಾರೆಂದು ನ್ಯಾಯಾಲಯದ ಗಮನಕ್ಕೆ ಬಂದರೆ ನ್ಯಾಯಾಲಯವು ವಾದಿಯ ಪರವಾಗಿ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಬಹುದಾಗಿರುತ್ತದೆ. ಈ ಹಂತದಲ್ಲಿ ವಾದಿಯು ತನ್ನ ಪರವಾಗಿ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆ ಇದೆ ಎನ್ನುವುದನ್ನು ಈ ಹಂತದಲ್ಲಿ ತೋರ್ಪಡಿಸುವ ಹೊಣೆಗಾರಿಕೆ ವಾದಿಯ ಮೇಲಿರುತ್ತದೆ. ಈ ನ್ಯಾಯಾಲಯವು ಸ್ಪಷ್ಟಪಡಿಸುವುದೇನೆಂದರೆ, ಈ ಹಂತದಲ್ಲಿ ನ್ಯಾಯಾಲಯವು ಕೇವಲ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ಮಾತ್ರ ಪರಿಶೀಲಿಸುತ್ತಿದ್ದು, ಪಕ್ಷಗಾರರ ಮೊದಲ ನೋಟದ ಸ್ವಾಮ್ಯವನ್ನಲ್ಲ (ಒಡೆತನ). ಈ ಹಂತದಲ್ಲಿ ನ್ಯಾಯಾಲಯವು ದೀರ್ಘವಾದ ವಿಚಾರಣೆಯನ್ನು ಮಾಡುವುದು ನಿಷಿದ್ಧವಾಗಿದ್ದು ಪಕ್ಷಗಾರರ ದಾವಾ ಆಸ್ತಿ ಮತ್ತು ಪ್ರತಿವಾದಿಯ ಆಸ್ತಿಗಳ ಮೇಲಿನ ಸ್ವಾಮ್ಯದ (ಒಡೆತನ) ಬಗ್ಗೆಯೇ ಚರ್ಚಿಸುವ ಹಾಗಿಲ್ಲ.

8. ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಈ ನ್ಯಾಯಾಲಯವು ವಾದಿಯು ಸಲ್ಲಿಸಿರುವ ಅರ್ಜಿ ಮತ್ತು ಪ್ರಾರ್ಥಿಸಿರುವಂತೆ ಪರಿಹಾರವನ್ನು ಪಡೆಯಲು ಅರ್ಹರೇ ಎಂಬುದನ್ನು ನಿರ್ಣಯಿಸಬೇಕಾಗಿರುತ್ತದೆ.

9. ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಮಂಜೂರು ಮಾಡುವ ಮುನ್ನ ನ್ಯಾಯಾಲಯವು ಯಾವ ರೀತಿಯ ಮಾನದಂಡಗಳನ್ನು ಅನುಸರಿಸಬೇಕು ಎನ್ನುವ ಬಗ್ಗೆ ಸಿಪಿಸಿ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸ್ಪಷ್ಟವಾಗಿ ಕಾನೂನಿನ ಪ್ರಕ್ರಿಯೆ ಅಡಕವಾಗಿರುತ್ತದೆ. **ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ಈ ಕೆಳಗಿನಂತಿರುತ್ತದೆ.**

1. **Cases in which the temporary injunction may be granted**–Where in any suit it is proved by affidavit or otherwise–

(a) that any property in dispute in a suit is in danger of being wasted, damaged or alienated by any party to the suit, or wrongfully sold in execution of a decree, or.

(b) that the defendant threatens, or intends, to remove or dispose of his property with a view to defrauding his creditors,

(c) that the defendant threatens to dispossess the plaintiff or otherwise cause injury to the plaintiff in relation to any property in dispute in the suit. the court may by order grant a temporary injunction to restrain such act, or make such other order for the purpose of staying and preventing the wasting, damaging, alienation, sale, removal or disposition of the property or dispossession of the plaintiff, or otherwise causing injury to the plaintiff in relation to any property in

dispute in the suit as the court thinks fit, until the disposal of the suit or until further orders.

2. **Injunction to restrain repetition or continuance of breach**– In any suit for restraining the defendant from committing a breach of contract or other injury of any kind, whether compensation is claimed in the suit or not, the plaintiff may, at any time after the commencement of the suit, and either before or after judgment, apply to the court for a temporary injunction to restrain the defendant from committing the breach of contract or injury complained of, or any breach of contract or injury of a like kind arising out of the same contract or relating to the same property or right.

2) The court may by order grant such injunction, on such terms as to the duration of the injunction, keeping an account, giving security, or otherwise, as the court thinks fit.

ತಾತ್ಕಾಲಿಕ ನಿರ್ಬಂದಕಾಜ್ಞೆಯನ್ನು ಯಾವ ಸಂದರ್ಭಗಳಲ್ಲಿ ಮಾಡಬಹುದು

"ಯಾವುದೇ ದಾವೆಯಲ್ಲಿ ಶಪತ ಪತ್ರದ ಮೂಲಕ ಅಥವಾ ಅನ್ಯತಾಃ

**ಎ.** ದಾವೆಯಲ್ಲಿ ವಿವಾದದಲ್ಲಿರುವ ಯಾವುದೇ ಸ್ವತ್ತು,ದಾವೆಯ ಯಾವನೇ ಪಕ್ಷಗಾರನಿಂದ ಪೋಲಾಗುವ, ಹಾನಿಗೊಳಗಾಗುವ ಅಥವಾ

ಪರಬಾರೆಯಾಗುವ, ಅಥವಾ ಡಿಕ್ರಿಯ ಅಮಲ್ಜಾರಿಯಲ್ಲಿ ಅಕ್ರಮವಾಗಿ ಮಾರಾಟವಾಗುವ ಅಪಾಯವಿದೆ ಎಂದು ಅಥವಾಃ

**ಬಿ.** ಪ್ರತಿವಾದಿಯು ತನ್ನ ಸಾಲಗಾರರಿಗೆ ಮೋಸ ಮಾಡುವ ದೃಷ್ಟಿಯಿಂದ ತನ್ನ ಸ್ವತ್ತನ್ನು ಸಾಗಿಸುವನೆಂದು ಅಥವಾ ವಿಲೇ ಮಾಡುವನೆಂದು ಹೆದರಿಸುತ್ತಾನೆ ಎಂದು ಅಥವಾ ಅಂತಹ ಉದ್ದೇಶವನ್ನು ಹೊಂದಿದ್ದಾನೆ ಎಂದುಃ

**ಸಿ.** ದಾವೆಯಲ್ಲಿ ವಿವಾದದಲ್ಲಿರುವ ಯಾವುದೇ ಸ್ವತ್ತಿನ ಸಂಭಂಧದಲ್ಲಿ ವಾದಿಯ ಸ್ವಾಧೀನದಿಂದ ತಪ್ಪಿಸುವದಾಗಿ ಅಥವಾ ಅನ್ಯತಾ ಆ ಬಗ್ಗೆ ವಾದಿಗೆ ಕ್ಷತಿಯಂಟು ಮಾಡುವದಾಗಿ ಪ್ರತಿವಾದಿಯು ವಾದಿಯನ್ನು ಎದುರಿಸುತ್ತಾನೆ ಎಂದು ರುಜುವಾತಾದರೆ ದಾವೆಯು ವಿಲೇಯಾಗುವವರೆಗೆ ಅಥವಾ ಮುಂದಿನ ಆದೇಶದವರೆಗೆ ಅಂತಹ ಕೃತ್ಯವನ್ನು ನಿಗ್ರಹಿಸಲು ನ್ಯಾಯಾಲಯವು ಆದೇಶದ ಮೂಲಕ ತಾತ್ಕಾಲಿಕ ನಿರ್ಬಂದಕಾಜ್ಞೆಯನ್ನು ಮಾಡಬಹುದು."

10. ಈ ಮೇಲೆ ಹೇಳಿದ ಸಂದರ್ಭಗಳಲ್ಲಿ ನ್ಯಾಯಾಲಯ ತಾತ್ಕಾಲಿಕ ನಿರ್ಭಂದಕಾಜ್ಞೆ ಪರಿಹಾರಗಳನ್ನು ಒಬ್ಬ ಪಕ್ಷಗಾರನ ಪರವಾಗಿ ಆದೇಶ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

11. ವಾದಿಯು ಕೇವಲ ಆರೋಪಣೆಯನ್ನು ಮಾಡುವುದರಿಂದ ನ್ಯಾಯಾಲಯದಿಂದ ಆದೇಶವನ್ನು ಪಡೆಯಲು ಅರ್ಹನಾಗಿರುವುದಿಲ್ಲ. ಅದೇ ರೀತಿ ತನ್ನ ಆರೋಪಣೆಗೆ ಪೂರಕವಾದ ಮೇಲ್ನೋಟಕ್ಕೆ ಸಮ್ಮತವಾದ ಪುರಾವೆಗಳನ್ನು ಹಾಜರುಪಡಿಸಬೇಕಾಗಿರುತ್ತದೆ.

12. ಪ್ರಸ್ತುತ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಕೂಲಂಕೂಷವಾಗಿ ಪರಿಶೀಲಿಸಲಾಯಿತು. ವಾದಿಯು ತನ್ನ ಕ್ಲೇಮಿನ

ಸಮರ್ಥನೆಗಾಗಿ ದಾವಾ ಸ್ಥಳದ ಪಹಣಿ ಪತ್ರಿಕೆ, ದಾನ ಪತ್ರ ಹಾಗೂ 2 ವೀಲ್ ನಾಮೆಗಳನ್ನು ಹಾಜರುಪಡಿಸಿರುತ್ತಾರೆ. ವಾದಿಯು ಹಾಜರುಪಡಿಸಿರುವ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಯಾದ ಶ್ರೀ. ಶ್ರೀರಾಮ @ ದೀಪಕ ನಾರಾಯಣ ಪ್ರಭುರವರ ಹೆಸರಿರುತ್ತದೆಯೇ ವಿನಃ ವಾದಿಯ ಹೆಸರಿರುವುದಿಲ್ಲ. ಅದರಂತೆ ಪ್ರತಿವಾದಿಯು ಸಹ ದಾವಾ ಸ್ಥಳದ ಪಹಣಿ ಪತ್ರಿಕೆ, ಎಂ.ಆರ್.ನಂಬರ್. ಎಚ್ 93/2014-15 ರ ಪ್ರತಿ ಹಾಗೂ ದಿನಾಂಕ 02-04-2013 ರಂದು ಪ್ರತಿವಾದಿಯ ತಂದೆ ನಾರಾಯಣ ಕೇಶವ ಪ್ರಭುರವರು ಮಾಡಿಟ್ಟ ವೀಲ್ ನಾಮೆಯ ಪ್ರತಿಯನ್ನು ಮತ್ತು ರಾಜಿ ಡಿಕ್ರಿಯ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

**13.** ಪ್ರಸ್ತುತ ದಾವೆಯಲ್ಲಿ ಅರ್ಜಿದಾರ ಪರ ವಕೀಲರ ವಾದವೇನೆಂದರೆ, ವಾದಿ ಮತ್ತು ಪ್ರತಿವಾದಿಯು ಸಹೋದರರಾಗಿದ್ದು, ಸದ್ರಿ ದಾವಾ ಸ್ಥಳವು ವಿಲ್ ಮುಖಾಂತರವಾಗಿ ವಾದಿಗೆ ಬಂದದ್ದಾಗಿದೆ. ಅರ್ಜಿದಾರನಿಗೆ ಸದ್ರಿ ದಾವಾ ಸ್ಥಳದಲ್ಲಿರುವ (ಕಾಲುದಾರಿಯ) ಅನುಭೋಗದ ಹಕ್ಕನ್ನು ಹೊರತಾಗಿ ಬೇರೆ ಯಾವುದೇ ದಾರಿ ಇರುವುದಿಲ್ಲ ಎಂದು ವಾದ ಮಂಡನೆ ಮಾಡಿರುತ್ತಾರೆ.

**14.** ಪ್ರತಿವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿಯು ಸ್ವಚ್ಛ ಮನಸ್ಸಿನಿಂದ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಮುಂದುವರೆದು, ಪ್ರತಿವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿಯು ಆರೋಪಣೆಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಈ ದಾವೆಯನ್ನು ಸಲ್ಲಿಸಲು ಊಹೆ ಮಾಡಿಕೊಂಡಿರುವ ಸಂಗತಿಗಳಾಗಿರುತ್ತವೆ.

**15.** ಪ್ರತಿವಾದಿ ಪರ ವಕೀಲರ ಮುಂದುವರೆದ ವಾದವೇನೆಂದರೇ, ವಾದಿಯು ತನ್ನ ಅರ್ಜಿಯಲ್ಲಿ ವಾದಿ ಮತ್ತು ಪ್ರತಿವಾದಿಯು ಜಂಟಿಯಾಗಿ ದಾವಾ ಸ್ಥಳದ ಸ್ವಾಧೀನತೆಯನ್ನು

ಹೊಂದಿದ್ದಾರೆಂದು ಹೇಳಿದ್ದು ಇರುತ್ತದೆ. ಆದರೆ ಸದ್ರಿ ದಾವಾ ಸ್ಥಳದಲ್ಲಿನ ಜಂಟಿ ಸ್ವಾಧೀನತೆಯನ್ನು ರುಜುವಾತುಪಡಿಸಲು ವಾದಿಯು ನ್ಯಾಯಾಲಯದ ಮುಂದೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಪ್ರಸ್ತುತ ದಾವೆಯು ವಿಲ್ ನಾಮೆಯ ಮೇಲೆ ಆಧಾರವಾಗಿರುವುದು ನ್ಯಾಯಾಲಯಕ್ಕೆ ಪ್ರಮುಖವಾಗಿ ಕಂಡು ಬರುತ್ತದೆ. ಅದು ಅಲ್ಲದೇ ವಾದಿಯು ಅನುಭೋಗದ ಹಕ್ಕನ್ನು ಕೇಳುತ್ತಿರುವುದರಿಂದ, ಈ ಹಂತದಲ್ಲಿ ಕೇವಲ ಪಹಣಿ ಪತ್ರಿಕೆಯ ಆಧಾರದ ಮೇಲೆ ಅನುಭೋಗದ ಹಕ್ಕನ್ನು ನಿರ್ಧರಿಸಲು ಸಾಧ್ಯವಿರುವುದಿಲ್ಲ.

**16.** ಉಭಯಪಕ್ಷಗಾರರ ಪರ ವಕೀಲರು ಮಂಡಿಸಿದ ವಾದವನ್ನು ಆಲಿಸಿದ ನಂತರ, ನ್ಯಾಯಾಲಯವು ಪ್ರಸ್ತುತ ಅರ್ಜಿಯನ್ನು ತೀರ್ಮಾನಿಸುವ ಕಾರಣಕ್ಕಾಗಿ, ಪಕ್ಷಗಾರರು ಮಧ್ಯಂತರ ಅರ್ಜಿಯ ಮೇಲೆ ಸಲ್ಲಿಸಿರುವ ವಾದಾಂಶಗಳು ಮತ್ತು ಹಾಜರುಪಡಿಸಿರುವ ದಸ್ತಾವೇಜುಗಳನ್ನು ಕೂಲಂಕೂಷವಾಗಿ ಪರಿಶೀಲಿಸಲಾಯಿತು. ಪ್ರಸ್ತುತ ಪ್ರಕರಣದಲ್ಲಿ ವಾದಿಯು, ತನ್ನ ವಾದ ಪತ್ರದಲ್ಲಿ ಹೇಳಿಕೊಂಡಿರುವ ದಾವಾ ಸ್ಥಳದ ಸ್ವಾಧೀನತೆಗೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ವಿಲ್ ನಾಮೆಗಳ ನೈಜತೆಯ ಕುರಿತು ಮತ್ತು ದಾವಾ ಸ್ಥಳದಲ್ಲಿ ದಾರಿ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಅರಿತುಕೊಳ್ಳಲು ನ್ಯಾಯಾಲಯಕ್ಕೆ ಪೂರ್ಣ ಪ್ರಮಾಣದ ವಿಚಾರಣೆ ನಡೆಯುವುದು ಅವಶ್ಯಕವಾಗಿದೆ ಎಂಬುದು ತಿಳಿಯುತ್ತದೆ.

**17.** ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯವು **ಗಂಗೂಬಾಯಿ ಬಾಬ್ಲಿಯಾ ಚೌಧ್ರಿ ವಿರುದ್ಧ ಸೀತಾರಾಮ್ ಬಾಲ್ ಚಂದ್ರ ಸುಕ್ತಾನ್ಕರ್ (AIR-1983-SC-742)** ಪ್ರಕರಣದಲ್ಲಿ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆಯಲು ವಾದಿಯು ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ರುಜುವಾತುಪಡಿಸುವುದು ಅವಶ್ಯವಿದ್ದು, ವಾದಿಯು ಒಂದು ವೇಳೆ ಸದರಿ

ಅಂಶವನ್ನು ನಿರೂಪಿಸಲು ವಿಫಲನಾದರೆ ನ್ಯಾಯ ಸಮ್ಮತವಾದ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆಯಲು ಅರ್ಹನಿರುವುದಿಲ್ಲ ಎಂದು ಹೇಳಿರುತ್ತದೆ.

18. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲವು **ಗೌರಿಶಂಕರ ಸ್ವಾಮಿಗಳು ವಿರುದ್ಧ ಸಿದ್ಧಗಂಗಾ ಮಠ (ILR**–1989–**Karnataka**–1701) ಪ್ರಕರಣದಲ್ಲೂ ಸಹ ಮಾನ್ಯ ಘನ ಸರ್ವೋಚ್ಚ ನ್ಯಾಯಾಲಯವು ಮೇಲಿನ ತೀರ್ಪಿನಂತೆ ಹೇಳಿರುತ್ತದೆ. ಸದರಿ ತೀರ್ಪುಗಳನ್ನು ಪ್ರಸ್ತುತ ಪ್ರಕರಣಕ್ಕನ್ವಯಿಸಿ ನೋಡಲಾಗಿ ವಾದಿಯು ಪ್ರಸ್ತುತ ಪ್ರಕರಣದಲ್ಲಿ ಮೋಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸಲು ವಿಫಲನಾಗಿರುವ ಕಾರಣ ಪ್ರಸ್ತುತ ತೀರ್ಪುಗಳನ್ವಯ ವಾದಿಯು ನ್ಯಾಯ ಸಮ್ಮತವಾದ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದು ಈ ನ್ಯಾಯಾಲಯವು **ಅಂಶ ಸಂಖ್ಯೆ 1 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತದೆ.**

19. **ಅಂಶ ಸಂಖ್ಯೆ**2 :– **ಅನೂಕೂಲತೆಯ ಒಲವು.**

ನ್ಯಾಯ ಸಮ್ಮತವಾದ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆದುಕೊಳ್ಳಲು ವಾದಿಯು ತಾತ್ಕಾಲಿಕ ನಿರ್ಬಂಧಕಾಜ್ಞೆಯ 2 ನೇ ನಿಯಮವಾದ ಅನುಕೂಲತೆಯ ಒಲವು ತನ್ನ ಪರವಾಗಿದೆ ಎಂದು ನಿರೂಪಿಸುವುದು ಅವಶ್ಯವಿರುತ್ತದೆ. ಅನುಕೂಲತೆಯ ಒಲವು ಎಂದರೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಯ ಪರವಾಗಿ ನೀಡದೇ ಇರುವುದರಿಂದ ವಾದಿಗೆ ಹೆಚ್ಚಿನದಾಗಿ ಕೇಡು, ಶ್ರಮ ಮತ್ತು ಅನಾನುಕೂಲತೆಯಾಗುವುದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಮಾನ್ಯ ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದವನ್ನು ಆಲಿಸಿದ ನಂತರ ಕಂಡು ಬರುವುದೇನೆಂದರೆ ಅನುಕೂಲತೆಯ ಒಲವು ಪ್ರತಿವಾದಿಯರ ಪರವಾಗಿದೆಯೇ ವಿನಃ

ವಾದಿಯ ಪರವಾಗಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ.

20. ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕೂಷವಾಗಿ ಪರಿಶೀಲಿಸಿದ ನಂತರ, ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಯ ಪರವಾಗಿ ನೀಡಿದ್ದೇ ಆದಲ್ಲಿ, ಅದರಿಂದ ಪ್ರತಿವಾದಿಗೆ ಹೆಚ್ಚಿನ ಕೇಡು, ಶ್ರಮ ಮತ್ತು ಅನಾನುಕೂಲತೆಯಾಗುತ್ತದೆ ಎಂದು ಹಾಗೂ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಗೆ ನೀಡದೆ ಇರುವುದರಿಂದ ವಾದಿಗೆ ಅಷ್ಟಾಗಿ ಕೇಡು, ಶ್ರಮ ಹಾಗೂ ಅನಾನುಕೂಲತೆಯು ಆಗುವುದಿಲ್ಲವೆಂದು ಅಭಿಪ್ರಾಯಪಡುತ್ತಾ, ಈ ನ್ಯಾಯಾಲಯವು ವಾದಿಯು ಅನುಕೂಲತೆಯ ಒಲವು ತನ್ನ ಪರವಾಗಿದೆ ಎಂದು ನಿರೂಪಿಸಲು ವಿಫಲರಾಗಿದ್ದಾರೆಂದು **ಅಂಶ ಸಂಖ್ಯೆ 2 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತದೆ.**

21. **ಅಂಶ ಸಂಖ್ಯೆ 3:- ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿ.**

ನ್ಯಾಯ ಸಮ್ಮತವಾದ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆಯಲು ವಾದಿಯು ಕೇವಲ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯು ತನ್ನ ಪರವಾಗಿದೆ ಎಂದು ಮತ್ತು ಅನುಕೂಲತೆಯ ಒಲವು ತನ್ನ ಪರವಾಗಿದೆ ಎಂದು ನಿರೂಪಿಸುವುದರ ಜೊತೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ತನ್ನ ಪರವಾಗಿ ನೀಡದಿದ್ದರೆ ತನಗೆ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆ ಎಂದು ನಿರೂಪಿಸುವುದು ಅವಶ್ಯವಾಗುತ್ತದೆ. ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಎಂದರೆ, ವಾದಿಗೆ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶವನ್ನು ನೀಡದೆ ಹೋದರೆ ಅವರಿಗಾಗುವ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯನ್ನು ಹಣದ ರೂಪದಲ್ಲಾಗಲೀ ಅಥವಾ ಇನ್ನಾವುದೇ ರೂಪದಲ್ಲಾಗಲಿ ನೀಡಿ ಸರಿಪಡಿಸಲಾಗದು ಎನ್ನುವ ಸಂದರ್ಭವಿದ್ದರೆ, ಅಂತಹ ಸಂದರ್ಭವನ್ನು ತುಂಬಲಾರದ ನಷ್ಟ

ಹಾಗೂ ಸರಿಪಡಿಸಲಾಗದ ಕ್ಷತಿ ಎಂದು ಹೇಳಬಹುದು. ಈ ನ್ಯಾಯಾಲಯವು ಒಂದು ಮತ್ತು ಎರಡನೇ ಅಂಶಗಳನ್ನು ಚರ್ಚಿಸುವ ಕಾಲಕ್ಕೆ ವಾದಿಯು ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸಿಲ್ಲವೆಂದು ಮತ್ತು ಅನುಕೂಲತೆಯ ಒಲವು ತನ್ನ ಪರವಾಗಿದೆ ಎಂದು ನಿರೂಪಿಸಲು ವಿಫಲರಾಗಿರುತ್ತಾರೆ ಎನ್ನುವ ಅಭಿಪ್ರಾಯಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ಸದರಿ ಮೂರು ನಿಯಮಗಳಲ್ಲಿನ ಮೂರನೇ ನಿಯಮವಾದ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯು ವಾದಿಗೆ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡದೆ ಇರುವುದರಿಂದ ಆಗುತ್ತದೆಯೇ ಅಥವಾ ಇಲ್ಲವೇ ಎಂಬುದು ಪ್ರಸ್ತುತವಾಗಿ ನಿರ್ಣಯಿಸತಕ್ಕಂತಹ ಅಂಶವಾಗಿರುತ್ತದೆ.

**22.** ಈ ಹಂತದಲ್ಲಿ ಸದರಿ ಅಂಶವು ಪ್ರಸ್ತುತ ಅರ್ಜಿಯ ತೀರ್ಮಾನಕ್ಕೆ ಸೂಕ್ತವಲ್ಲ ಎನ್ನುವ ಅಭಿಪ್ರಾಯಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ಪ್ರಸ್ತುತ ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕೂಷವಾಗಿ ಪರಿಶೀಲಿಸಿದ ನಂತರ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಯ ಪರವಾಗಿ ನೀಡುವುದರಿಂದ ಪ್ರತಿವಾದಿಗೆ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆ ಎಂದು ಹಾಗೂ ಪ್ರಸ್ತುತ ಅರ್ಜಿಯನ್ನು ವಜಾಗೊಳಿಸುವುದರಿಂದ ವಾದಿಗೆ ಯಾವುದೇ ರೀತಿಯಲ್ಲೂ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯುಂಟಾಗುವುದಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತಾ **ಅಂಶ ಸಂಖ್ಯೆ 3 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತದೆ.**

**23.** **ಅಂಶ ಸಂಖ್ಯೆ 4**:- ಈ ಮೇಲ್ಕಂಡ ಕಾರಣಗಳಿಗೆ ಈ ಮುಂದಿನಂತೆ ಆದೇಶಿಸಲಾಗಿದೆ.

**ಆದೇಶ**

ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ವಜಾ ಮಾಡಲಾಗಿದೆ.

ವೆಚ್ಚಗಳ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

(ಈ ಮೇಲ್ಕಂಡ ಆದೇಶವನ್ನು ನಾನು ನೇರವಾಗಿ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿ ಆ ನಂತರ ತಪ್ಪುಗಳನ್ನು ಸರಿಪಡಿಸಿ, ನಂತರ ನನ್ನ ಸಹಿಯೊಂದಿಗೆ ಈ ದಿನ ಅಂದರೆ **16 ನೇ ಡಿಸೆಂಬರ್** 2023 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

Digitally signed by
Iranna Hunashikatti
Addl. Civil Judge and
JMFC., Honnavar.

(ಈರಣ್ಣ ಹುಣಶಿಕಟ್ಟಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಹೊನ್ನಾವರ.

*******